# ದಿವ್ಯಸ್ಮೃತಿ

# ಪರಿಶುದ್ಧ ಹೃದಯರಾದ ಶ್ರದ್ಧಾಪ್ರಾಣಾ ಮಾತಾಜಿ

*(ಶ್ರೀಶಾರದಾ ಮಠ ಮತ್ತು ರಾಮಕೃಷ್ಣ ಶಾರದಾ ಮಿಷನ್ನಿನ ಮೂರನೆಯ ಅಧ್ಯಕ್ಷರಾಗಿದ್ದ ಪ್ರವ್ರಾಜಿಕಾ ಶ್ರದ್ಧಾಪ್ರಾಣಾ ಮಾತಾಜಿಯವರು ಫೆಬ್ರವರಿ ೦೩, ೨೦೦೯ ರಂದು ಮಹಾಸಮಾಧಿಯನ್ನು ಹೊಂದಿದರು. ಆಧ್ಯಾತ್ಮಿಕಸಂಪನ್ನಯುಕ್ತರೂ ಸಾರ್ಥಕಜೀವಿಗಳೂ ಆಗಿದ್ದ ಪೂಜ್ಯ ಮಾತಾಜಿಯವರ ಪುಣ್ಯಸ್ಮೃತಿಯನ್ನು ಇಲ್ಲಿ ನೀಡಲಾಗಿದೆ.)*

**ಪ್ರ**ವ್ರಾಜಿಕಾ ಶ್ರದ್ಧಾಪ್ರಾಣಾ ಅವರು ೧೯೧೮ ರಲ್ಲಿ ಬಿಹಾರದ ಪಾಟ್ನಾ ನಗರದಲ್ಲಿ ಲಕ್ಷ್ಮೀ ಪೂಜೆಯ ದಿನ ಜನಿಸಿದರು. ಆದುದರಿಂದ ಅವರ ತಂದೆತಾಯಿಗಳು ಅವರಿಗೆ ಲಕ್ಷ್ಮಿ ಎಂದು ಹೆಸರಿಟ್ಟರು. ಲಕ್ಷ್ಮಿಯ ತಂದೆ ಮಥುರನಾಥ ಸಿನ್ಹ, ಪ್ರಖ್ಯಾತರಾದ ಹೈಕೋರ್ಟ್ ನ್ಯಾಯಾಧೀಶರು. ವಿಶೇಷವೆಂದರೆ ಅವರು ಶ್ರೀರಾಮ ಕೃಷ್ಣರನ್ನು ಅನೇಕ ವೇಳೆ ಕಂಡಿದ್ದರು ಮತ್ತು ಅವರ ಪಾದಗಳನ್ನು ಮುಟ್ಟಿ ನಮಸ್ಕರಿಸಿದ್ದರು. ಅಂದಿನ ಕಾಲದ ಯುವಕರಂತೆ ಅವರು ಕೇಶವಚಂದ್ರಸೇನರಿಂದ ಆಕರ್ಷಿತರಾಗಿ ಸಾಧಾರಣ ಬ್ರಾಹ್ಮ ಸಮಾಜದ ಸದಸ್ಯರಾಗಿದ್ದರು. ಅವರು ಈಶ್ವರಚಂದ್ರ ವಿದ್ಯಾ ಸಾಗರರ ಶಾಲೆಯಲ್ಲಿ ವಿದ್ಯಾರ್ಥಿಯಾಗಿದ್ದಾಗ ಶ್ರೀರಾಮಕೃಷ್ಣರು ಮಾಸ್ಟರ್ ಮಹಾಶಯರೊಂದಿಗೆ ಅವರ ಶಾಲೆಗೆ ಬಂದಿದ್ದರಂತೆ. ಅವರು ಸ್ವಾಮಿ ವಿವೇಕಾನಂದರು ಮತ್ತು ಶ್ರೀರಾಮಕೃಷ್ಣರ ಇತರ ಶಿಷ್ಯರನ್ನು ಕಂಡಿದ್ದರು. ಒಮ್ಮೆ ಕಾರ್ಯನಿಮಿತ್ತ ಸೋದರಿ ನಿವೇದಿತಾ, ರವೀಂದ್ರನಾಥ ಠಾಕೂರ್ ಮತ್ತು ಜಗದೀಶಚಂದ್ರ ಬೋಸರೊಡಗೂಡಿ ಗಯೆಗೆ ಹೋಗಿದ್ದರು. ಕಾಲಾನಂತರ, ಚೆನ್ನಾಗಿ ವರಮಾನ ಬರುತ್ತಿದ್ದ ನ್ಯಾಯಾಧೀಶರ ವೃತ್ತಿಯನ್ನು ತ್ಯಜಿಸಿ, ಅವಶ್ಯ ಬಿದ್ದಾಗ ಕಾನೂನಿನ ಸಲಹೆ ನೀಡುತ್ತ, ಕಾಲಯಾಪನೆ ಮಾಡಿಕೊಂಡಿದ್ದರು. ಲಕ್ಷ್ಮಿಯ ತಾಯಿ ಸುಶೀಲಾದೇವಿ, ಹೆಸರಿಗೆ ತಕ್ಕಂತೆ ಸುಶೀಲೆ. ಅವರಿಗೆ ಭಗವಂತನಲ್ಲಿ ಭಕ್ತಿ ಮತ್ತು ಅತಿಥಿ ಸತ್ಕಾರದಲ್ಲಿ ಶ್ರದ್ಧೆ ಇತ್ತು. ಅವರು ಬಂಗಾಳಿ ಸಾಹಿತ್ಯವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಇಂತಹ ತಂದೆತಾಯಿಯರಿಂದ ಪೋಷಿಸಲ್ಪಟ್ಟ ಲಕ್ಷ್ಮಿ ಆಧ್ಯಾತ್ಮಿಕ ಪ್ರವೃತ್ತಿ, ಸೇವಾಮನೋಭಾವ ಮತ್ತು ಸಾಹಿತ್ಯಪ್ರೇಮಗಳನ್ನು ಪಡೆದಿದ್ದಳು; ತಂದೆತಾಯಿಗಳೊಂದಿಗೆ, ಆಗತಾನೆ ಪಾಟ್ನಾದಲ್ಲಿ ಪ್ರಾರಂಭವಾಗಿದ್ದ ಶ್ರೀರಾಮಕೃಷ್ಣ ಆಶ್ರಮಕ್ಕೆ ಹೋಗುತ್ತಿದ್ದಳು. ಆಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಜ್ಞಾನೇಶ್ವರಾನಂದರು ಸುಮಧುರ ಕಂಠದಿಂದ ಪುಳಕಿತರಾಗಿ ಹಾಡುತ್ತಿದ್ದ ಭಜನೆಗಳು ಲಕ್ಷ್ಮಿಯ ಮೇಲೆ ಆಳವಾದ ಪ್ರಭಾವ ಬೀರಿದ್ದವು. ಬಾಲ್ಯದಿಂದಲೆ ಅಕೆಗೆ ರಾಮಕೃಷ್ಣ ಮಹಾಸಂಘದ ಹಲವಾರು ಸಾಧುಗಳ ಸಂಪರ್ಕ ಉಂಟಾಯಿತು. ಅದು ಲಕ್ಷ್ಮಿಯ ಆಧ್ಯಾತ್ಮಿಕ ಜೀವನದ ವಿಕಾಸಕ್ಕೆ ಭದ್ರ ಬುನಾದಿಯನ್ನು ಹಾಕಿತು.

ರಾಮಕೃಷ್ಣ ಮಹಾಸಂಘದ ಆರನೆಯ ಅಧ್ಯಕ್ಷರಾದ ಸ್ವಾಮಿ ವಿರಜಾನಂದರು ೧೯೪೧ ರಲ್ಲಿ ಪಾಟ್ನಾ ಆಶ್ರಮಕ್ಕೆ ಭೇಟಿ ಇತ್ತಾಗ ಲಕ್ಷ್ಮಿದೀದಿಗೆ ಅವರಿಂದ ಮಂತ್ರದೀಕ್ಷೆ ದೊರೆಯಿತು. ಅಂದಿನಿಂದ ಸ್ವಾಮಿ ವಿರಜಾನಂದರ ಮಹಾಸಮಾಧಿಯ ತನಕ (೧೯೫೧) ಲಕ್ಷ್ಮಿದೀದಿ ತಮ್ಮ ಗುರುಗಳಿಗೆ ಪತ್ರ ಬರೆಯುತ್ತಿದ್ದರು. ರಾಮಕೃಷ್ಣ ಮಠದ ಸಂನ್ಯಾಸಿಗಳ ಜೀವನ ಮತ್ತು ಬೋಧನೆಗಳೇ



ಅವರ ಶಕ್ತಿಯ ಆಗರವಾಗಿದ್ದುವು. ಲಕ್ಷ್ಮಿದೀದಿ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ ಪದವಿ ಪಡೆದು, ನಂತರ ವಾರಾಣಸಿಯಲ್ಲಿ ಅನಿಬೆಸೆಂಟ್ ಕಾಲೇಜಿನಲ್ಲಿ ಕೆಲವು ವರ್ಷಗಳ ಕಾಲ ಅಧ್ಯಾಪಕಿಯಾಗಿ ಕೆಲಸ ಮಾಡಿದರು. ಆ ಕಾಲದಲ್ಲಿ ಹೆಣ್ಣುಮಕ್ಕಳು ಶಿಕ್ಷಣ ಪಡೆಯುವುದೇ ಅಪರೂಪವಾಗಿದ್ದಾಗ, ೨೩ ವರ್ಷಗಳ ಅವಿವಾಹಿತ ಯುವತಿ ಸ್ನಾತಕೋತ್ತರ ಪದವಿಯನ್ನು ಪಡೆದು ಕಾಲೇಜಿನ ಅಧ್ಯಾಪಕಿಯಾಗಿದ್ದುದು ಒಂದು ಸಾಹಸವೇ ಸರಿ. ಅವರು ವಾರಾಣಸಿಯಲ್ಲಿ ಇದ್ದಷ್ಟು ಕಾಲ ಸಂಜೆ ತಪ್ಪದೆ ಅಲ್ಲಿನ ರಾಮಕೃಷ್ಣ ಅದ್ವೈತಾಶ್ರಮಕ್ಕೆ ಹೋಗಿ, ಹಿರಿಯ ಸಂನ್ಯಾಸಿಗಳನ್ನು ಭೇಟಿಮಾಡುತ್ತಿದ್ದರು. ಇದರಿಂದ ಅವರಂತೆ ತಾವೂ ವೈರಾಗ್ಯ ಜೀವನವನ್ನು ಕೈಗೊಂಡು ಸಂನ್ಯಾಸಿನಿಯಾಗಬೇಕೆಂಬ ಇಚ್ಛೆ ಬಲವಾಯಿತು. ತಂದೆತಾಯಿಗಳ ವಿವಾಹದ ಪ್ರಸ್ತಾಪವನ್ನು ನಿರಾಕರಿಸಿ ೧೯೪೮ ರಲ್ಲಿ ಕೊಲ್ಕತಾದ ನಿವೇದಿತಾ ವಿದ್ಯಾಲಯಕ್ಕೆ ಹೋದರು. ಆಗ ಪುರುಷ ಸಂನ್ಯಾಸಿಗಳಿಗೆ **ರಾಮಕೃಷ್ಣ ಮಠ** ಇದ್ದಂತೆ ಸ್ತ್ರೀಸಂನ್ಯಾಸಿನಿಯರಿಗೆ **ಶಾರದಾ ಮಠ** ಎಂಬ ಸಂಸ್ಥೆ ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ಆಧುನಿಕ ಸಂನ್ಯಾಸಧರ್ಮದ ಪ್ರವರ್ತಕರಾದ ಸ್ವಾಮಿ ವಿವೇಕಾನಂದರು ಸ್ತ್ರೀಯರಿಗೆ, ಶ್ರೀಶಾರದಾ ದೇವಿಯವರೇ ಕೇಂದ್ರವಾಗಿ ಉಳ್ಳ ಪ್ರತ್ಯೇಕವಾದ ಮಠವೊಂದನ್ನು ಸ್ಥಾಪಿಸಬೇಕೆಂದು ಹೇಳಿದ್ದರು. ಆದರೆ ಅದು ಇನ್ನೂ ಕಾರ್ಯಗತ

ಗೊಡಿರಲಿಲ್ಲ. ಸೇವಾಕಾಂಕ್ಷಿಗಳಾದ ವೈರಾಗ್ಯಶಾಲಿ ಸ್ತ್ರೀಯರು, ರಾಮಕೃಷ್ಣ ಸಂಘದವರು ಆಗ ನಡೆಸುತ್ತಿದ್ದ ನಿವೇದಿತಾ ವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತ ವಾಸಿಸಬಹುದಿತ್ತು. ಲಕ್ಷ್ಮೀದೀದಿ ನಿವೇದಿತಾ ವಿದ್ಯಾಲಯವನ್ನು ಸೇರಿದಾಗ ಅಂತಹ ಕೆಲವು ಸ್ತ್ರೀಯರು ಆಗಲೆ ಅಲ್ಲಿದ್ದರು. ಅವರಲ್ಲೊಬ್ಬರಾದ ರೇಣುಕಾದೇವಿ ಎಂಬುವವರು, ವಿದ್ಯಾಲಯದ ಮುಖ್ಯೋಪಾಧ್ಯಾಯಿನಿಯಾಗಿದ್ದರು (ಕಾಲಕ್ರಮದಲ್ಲಿ ಅವರು ಪ್ರವ್ರಾಜಿಕಾ ಮೋಕ್ಷಪ್ರಾಣಾ ಎಂಬ ಸಂನ್ಯಾಸಿನಿಯಾಗಿ ಶ್ರೀಶಾರದಾಮಠದ ಎರಡನೆಯ ಅಧ್ಯಕ್ಷರಾದರು). ಮುಂದೆ, ೧೯೫೩ ರಲ್ಲಿ, ಶ್ರೀಶಾರದಾದೇವಿಯವರ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ, ಶ್ರೀಶಾರದಾ ಮಠದ ಸ್ಥಾಪನೆಯಾದಾಗ, ರಾಮಕೃಷ್ಣ ಮಹಾಸಂಘದ ಏಳನೆಯ ಅಧ್ಯಕ್ಷರಾದ ಸ್ವಾಮಿ ಶಂಕರಾನಂದಜಿ ಅವರಿಂದ ಲಕ್ಷ್ಮೀದೀದಿಯವರಿಗೆ ಬ್ರಹ್ಮಚರ್ಯ ದೀಕ್ಷೆ ದೊರೆಯಿತು. ನಂತರ ೧೯೫೯ ರಲ್ಲಿ ಶ್ರೀಶಾರದಾದೇವಿಯವರ ಜನ್ಮದಿನದಂದು ಸ್ವಾಮಿ ಶಂಕರಾನಂದರಿಂದ ಸಂನ್ಯಾಸ ದೀಕ್ಷೆ ಪಡೆದು 'ಪ್ರವ್ರಾಜಿಕಾ ಶ್ರದ್ಧಾಪ್ರಾಣಾ' ಎಂಬ ಹೆಸರು ಪಡೆದರು.

ಶ್ರದ್ಧಾಪ್ರಾಣಾ ಮಾತಾಜಿ ೧೯೪೮ ರಿಂದ ೧೯೮೬ ರವರೆಗೆ ಮೂವತ್ತೆಂಟು ವರ್ಷಗಳ ಕಾಲ ನಿವೇದಿತಾ ಶಾಲೆಯಲ್ಲಿ ಸೇವೆ ಸಲ್ಲಿಸಿದರು. ೧೯೫೫ ರಲ್ಲಿ ಶಾಲೆಯ ಮುಖ್ಯೋಪಾಧ್ಯಾಯಿನಿ ಮತ್ತು ಕಾರ್ಯದರ್ಶಿಗಳಾದರು. ೧೯೬೩ ರಲ್ಲಿ ಶ್ರೀಶಾರದಾ ಮಠ ಮತ್ತು ರಾಮಕೃಷ್ಣ ಶಾರದಾ ಮಿಷನ್ನಿನ ಸಹಾಯಕ ಕಾರ್ಯದರ್ಶಿಗಳಾದರು. ಶ್ರದ್ಧಾಪ್ರಾಣಾ ಅವರು ಹೆಸರಿಗೆ ತಕ್ಕಂತೆ ಎಲ್ಲ ಕೆಲಸಗಳನ್ನೂ ಶ್ರದ್ಧೆಯಿಂದ ಮಾಡುತ್ತಿದ್ದರು. ಶಿಸ್ತಿನ ಸಿಪಾಯಿಯಾದ ಅವರಿಗೆ ವಿದ್ಯಾರ್ಥಿನಿಯರು ಅಂಜುತ್ತಿದ್ದರು. ಅವರ ಎಲ್ಲ ಕೆಲಸಗಳಲ್ಲಿಯೂ ಶಿಸ್ತು ಎದ್ದು ಕಾಣುತ್ತಿತ್ತು. ಹೂವಿನ ಗಿಡಮರಗಳೆಂದರೆ ಅವರಿಗೆ ಪ್ರೀತಿ. ಓದು ಅವರ ಪ್ರಿಯವಾದ ಹವ್ಯಾಸವಾಗಿತ್ತು. ತೀರ್ಥಯಾತ್ರೆ ಮತ್ತು ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೋಗುವುದಕ್ಕೆ ಅವರು ಇಚ್ಛಿಸುತ್ತಿರಲಿಲ್ಲ. ಅವರ ಪ್ರಯಾಣವೆಲ್ಲ ಕಾರ್ಯನಿಮಿತ್ತ, ಅಷ್ಟೆ. ಸಂಘಕ್ಕಾಗಿ ಅನವರತ ದುಡಿಯುತ್ತಿದ್ದರು. ಆದರೆ ತಮ್ಮ ಸ್ವಂತ ಅನುಕೂಲವನ್ನು ಲೆಕ್ಕಿಸುತ್ತಲೇ ಇರಲಿಲ್ಲ. ಕಾರ್ಯಕ್ಷೇತ್ರವನ್ನು ವಿಸ್ತಾರಗೊಳಿಸುವ ಬದಲು ಕಾರ್ಯದ ಗುಣಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಆದರ್ಶಗಳ ಅನುಷ್ಠಾನದಿಂದ ಪರಿಪಕ್ವವಾದ ಸುಭದ್ರವಾದ ಜೀವನದ ಆಧಾರವಿಲ್ಲದೆ ಮಾಡುವ ಭಾಷಣ ಮತ್ತು ಪ್ರವಚನಗಳು ನಿರರ್ಥಕವೆಂದು ಅವರು ಹೇಳುತ್ತಿದ್ದರು. ಶ್ರದ್ಧಾಪ್ರಾಣಾ ಮಾತಾಜಿ ೧೯೯೪ ರಲ್ಲಿ ಶ್ರೀಶಾರದಾ ಮಠದ ಪ್ರಧಾನ ಕಾರ್ಯದರ್ಶಿಗಳಾದರು ಮತ್ತು ೧೯೯೯ ರಲ್ಲಿ ಅಧ್ಯಕ್ಷರಾದರು. ಅನೇಕ ಭಕ್ತರು ಅವರಿಂದ ಮಂತ್ರದೀಕ್ಷೆ ಪಡೆದರು. ಅಧ್ಯಕ್ಷರಾದ ಮೇಲೆ ಬೆಂಗಳೂರಿನ ಶ್ರೀಶಾರದಾ ಮಠಕ್ಕೆ ಎರಡು ಬಾರಿ, ೨೦೦೦ ಮತ್ತು ೨೦೦೫ ರಲ್ಲಿ ಬಂದಿದ್ದರು ಮತ್ತು ಅಲ್ಲಿನ ಅನೇಕ ಭಕ್ತರಿಗೆ ಮಂತ್ರದೀಕ್ಷೆ ನೀಡಿದರು. ತೊಂಬತ್ತು ವರ್ಷಗಳನ್ನು ದಾಟಿದ್ದ ಮಾತಾಜಿಯವರಿಗೆ ದೇಹಾರೋಗ್ಯ ಕೆಟ್ಟಿತ್ತು. ಫೆಬ್ರವರಿ ೩, ೨೦೦೯ ರಂದು ಅವರು ಇಹಲೋಕವನ್ನು ತ್ಯಜಿಸಿದರು.

ಅವರ ೬೦ ವರ್ಷಗಳ ಸಂಘಜೀವನದಲ್ಲಿ ಶಾಲೆ ಮತ್ತು ಮಠಗಳ ಆಡಳಿತದಲ್ಲಿ ಅನೇಕ ಸಮಸ್ಯೆಗಳು ಎದುರಾಗಿದ್ದವು. "ಹೋರಾಟವೇ ಜೀವನ. ದುಃಖ, ಕಷ್ಟಗಳು ಮತ್ತು ಪರಾಭವಗಳ ಮಧ್ಯದಲ್ಲಿಯೇ, ಹೋರಾಟದ ಮೂಲಕವೇ ಜೀವನ ರೂಪಿತವಾಗುತ್ತದೆ. ಯಾರ ಜೀವನದಲ್ಲಿ ಹೋರಾಟವಿಲ್ಲವೋ ಅವರು ಜೀವಂತ ಶವಗಳು" ಎಂಬ ಅವರ ಗುರುಗಳಾದ ಸ್ವಾಮಿ ವಿರಜಾನಂದರ ಸ್ಫೂರ್ತಿವಾಣಿ, ಶ್ರದ್ಧಾಪ್ರಾಣಾ ಮಾತಾಜಿಯವರ ದೀರ್ಘ ಆಧ್ಯಾತ್ಮಿಕಯಾತ್ರೆಯ ಊರುಗೋಲಾಗಿತ್ತು.

## ಸ್ನೇಹಪ್ರಭ

### ಆಸೆ ಪಡುವುದು ತಪ್ಪೇ? ಆಸೆಗೂ ದುರಾಸೆಗೂ ವ್ಯತ್ಯಾಸವೇನು?

'ಆಸೆಯೇ ದುಃಖಕ್ಕೆ ಕಾರಣ' ಎಂದು ಎಲ್ಲ ಮಹಾತ್ಮರೂ ಹೇಳುತ್ತಾರೆ. 'ಅಜ್ಞಾನವೇ ದುಃಖಕ್ಕೆ ಕಾರಣ' ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ.' ಮನುಷ್ಯನು ಸುಖವನ್ನು ಬಯಸುವುದರಿಂದ ಮತ್ತು ಅದನ್ನು ಹೊರಗಡೆ ಅರಸುವುದರಿಂದ ಅನೇಕ ಸುಖದಾಯಕ ವಿಷಯವಸ್ತುಗಳಿಗಾಗಿ ಆಸೆ ಪಡುತ್ತಾನೆ. ಹೊರಗಿನ ವಿಷಯವಸ್ತುಗಳಿಂದ ಸುಖ ಸಿಕ್ಕುತ್ತದೆ ಎಂಬ ಭ್ರಮೆಯೇ ಅಜ್ಞಾನ. ಈ ಅಜ್ಞಾನದಿಂದ ಮನುಷ್ಯ ಹೊರಗಿನ ವಿಷಯ ವಸ್ತುಗಳಿಗಾಗಿ ಆಸೆ ಪಡುತ್ತಾನೆ. ಆದರೆ ಅವುಗಳಿಂದಾವುದರಿಂದಲೂ ಸುಖ ಸಿಕ್ಕದೆ ಉಂಟಾಗುವ ನಿರಾಸೆಯೇ ದುಃಖ. ವಿಷಯವಸ್ತುಗಳಿಂದ, ಹೊರಗಿನ ಸುಖಸಾಧನಗಳಿಂದ ತಾತ್ಕಾಲಿಕ ಸುಖಸ್ಪರ್ಶ ಉಂಟಾಗುತ್ತದೆಯೇ ಹೊರತು ನಿಜವಾದ ಸುಖ ದೊರೆಯುವುದಿಲ್ಲ. ಅದೊಂದು ಇಂದ್ರಿಯ ಪ್ರಚೋದನೆ ಅಷ್ಟೇ. ಇದನ್ನೇ ನಾವು ಸುಖವೆಂದು ಭ್ರಮಿಸುತ್ತೇವೆ. ಸುಖಸಾಧನಗಳು ವೃದ್ಧಿಯಾದಷ್ಟೂ ಸುಖ ಕಡವೆಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸುಖ ಅಂತರಿಕವಾದುದು. ಅಂತರಂಗದಲ್ಲಿ ಸಾಮರಸ್ಯವಿದ್ದರೆ, ಸಾರ್ಥಕತೆಯ ಭಾವ ಇದ್ದರೆ, ಅದರಿಂದ ಉಂಟಾಗುವ ಅಂತರಿಕ ತೃಪ್ತಿಯೇ ಸುಖ. ಆಗ ಬಾಹ್ಯಸುಖದ ಬಯಕೆಯೂ ಕಡಮೆಗೊಳ್ಳುತ್ತದೆ ಮತ್ತು ಸುಖಸಾಧನೆಗಳ ಆಸೆಯೂ ಕಡಿಮೆಯಾಗುತ್ತದೆ. ಆದ್ದರಿಂದ ಆಸೆ ಪಡುವುದಿಕ್ಕಿಂತ ಅದನ್ನು ಬಿಡುವುದೇ ಲೇಸು– ಆಸೆಯನ್ನು ಬಿಡುವ ಆಸೆಯೇ ಲೇಸು.

ಆಸೆ ಕೆಟ್ಟದ್ದಾದ್ದರಿಂದ ಆಸೆಗಳೆಲ್ಲವೂ ದುರಾಸೆಗಳೇ. ಅವುಗಳನ್ನು ಒಂದು ಹಿಡಿತದಲ್ಲಿ ಇರಿಸಿಕೊಂಡರೆ ಅವುಗಳಿಂದಾಗುವ ವೈಯಕ್ತಿಕ ಮತ್ತು ಸಾಮಾಜಿಕ ಹಾನಿ ಕಡಮೆಯಾಗುವುದರಿಂದ ಅವುಗಳನ್ನು ಸಾಮಾನ್ಯ ಆಸೆಗಳೆಂದು ಪರಿಗಣಿಸಬಹುದು.

ಬರಹ: ಸ್ವಾಮಿ ನಿತ್ಯಸ್ಥಾನಂದ